ಕರ್ನಾಟಕ ವಿಧಾನಸಭೆ

ಮಂಗಳವಾರ ೧೯ನೇ ಮಾರ್ಚ್ ೨೦೦೨ ಸದನವು ವಿಧಾನಸಭೆ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೦೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

೧. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿರುವ ಬರ ಪರಿಸ್ಥಿತಿ ಹಾಗೂ ಕುಡಿಯುವ ನೀರಿನ ಸಮಸ್ಯೆ.

ಶ್ರೀ ವಿ.ಸೋಮಣ್ಣ(ಬಿನ್ನಿಪೇಟೆ): ಮಾನ್ಯ ಅಧ್ಯಕ್ಷರೆ, ನಾನೊಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ತಾವು ತುರ್ತಾಗಿ ಅದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಬರ ಹಾಗೂ ಕುಡಿಯುವ ನೀರಿನ ಸಮಸ್ಯೆ ಮತ್ತು ವಿದ್ಯುತ್ತಿನ ಸಮಸ್ಯೆಯ ಬಗ್ಗೆ ನಾವೂ ಸಹ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ದಯವಿಟ್ಟು ಅದನ್ನು ಪ್ರಥಮ ಪ್ರಾಶಸ್ತ್ಯದ ಮೇಲೆ ತೆಗೆದುಕೊಳ್ಳಬೇಕು, ಏಕೆಂದರೆ ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಹಾಹಾಕಾರ ಭಯಂಕರವಾಗಿದೆ ಮತ್ತು ಬರಗಾಲ ಕಾಮಗಾರಿಗಳನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಬರಗಾಲ ಕಾಮಗಾರಿಗಳನ್ನು ಏನು ಮೊದಲು ಪ್ರಾರಂಭಿಸಿದ್ದರೋ ಅದನ್ನು ಎಲ್ಲೋ ಒಂದು ಕಡೆ ಮಳೆಯಾಯಿತು ಎಂದು ಈಗ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ, ಮತ್ತು ಇದಕ್ಕೆ ಏನು ಹಣ ಮಂಜೂರು ಮಾಡಿದ್ದರೋ ಆ ಹಣವನ್ನು ಎಷ್ಟೋ ಜಿಲ್ಲೆಗಳಲ್ಲಿ ವಾಪಸ್ ಕಳುಹಿಸಿದ್ದಾರೆ. ಇಡೀ ರಾಜ್ಯದಲ್ಲಿ ಬಹುತೇಕ ತಾಲ್ಲೂಕುಗಳಲ್ಲಿ ಬರದ ಪರಿಸ್ಥಿತಿಯಿಂದಾಗಿ ರೈತರು ತೊಂದರೆಯಲ್ಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣವಾಗಿ ವಿದ್ಯುತ್ತಿನ ಅಭಾವದಿಂದ ವೋಲ್ಟೇಜ್ ಕಡಿಮೆಯಾಗಿ ರೈತರು ತಮ್ಮ ಹೊಲಗಳಿಗೆ ನೀರು ಬಿಡಲಾರದ ಪರಿಸ್ಥಿತಿ ನಿರ್ಮಾಣವಾಗಿದೆ.

ಅಧ್ಯಕ್ಷರು: ಆಯಿತು, ಅದಕ್ಕೆ ನಾನು ಉತ್ತರ ಹೇಳುತ್ತೇನೆ ಬಿಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಜನತಾ ಪರಿವಾರದ ವತಿಯಿಂದ ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಇವತ್ತು ಬಹಳ ಮುಖ್ಯವಾಗಿ ಈ ಸರ್ಕಾರದ ಪಂಚೇಂದ್ರಿಯಗಳು ಕೆಲಸ ಮಾಡುತ್ತಿವೆಯೋ ಇಲ್ಲವೋ ಅದು ನಮಗಂತೂ ಅರ್ಥವಾಗುತ್ತಿಲ್ಲ. ಶಾಸಕರುಗಳಿಗೆ ಅವರವರ ಕ್ಷೇತ್ರಗಳಿಗೆ ಹೋಗುವುದು ಬಹಳ ಕಷ್ಟವಾಗಿದೆ.

ಹಳ್ಳಿಗಳಲ್ಲಿ ಮೊದಲನೆಯ ಬಾರಿಗೆ ನಾವು ಜಲಕ್ಷಾಮವನ್ನು ನೋಡುತ್ತಿದ್ದೇವೆ. ನವೆಂಬರ್ ತಿಂಗಳಿನಲ್ಲಿ ಮಳೆ ವಿಫಲವಾಗಿದ್ದು, ಜಲಾಶಯಗಳಲ್ಲಿ ನೀರು ಇಲ್ಲ ಎನ್ನುವ ಕಾರಣವನ್ನು ಕೊಟ್ಟು ರಾಜ್ಯದಲ್ಲಿ ತೀವ್ರವಾದ ವಿದ್ಯುತ್ತಿನ ಅಭಾವದಿಂದಾಗಿ ಹಾಗೂ ಸರಬರಾಜಿನ ಕೊರತೆಯಿಂದಾಗಿ ಇವತ್ತು ಕುಡಿಯುವ ನೀರಿಗೂ ಸಹ ಜನ ಬವಣೆ ಪಡತಕ್ಕಂಥ ಪರಿಸ್ಥಿತಿ ಸಂಪೂರ್ಣವಾಗಿ ಗ್ರಾಮೀಣ ಪ್ರದೇಶದಲ್ಲಿ ಇದೆ. ಹುಬ್ಬಳ್ಳಿಯಂತಹ ನಗರದಲ್ಲಿ ಹತ್ತು ದಿವಸಗಳಿಗೆ ಒಂದು ಸಾರಿ ನೀರನ್ನು ಕೊಡುತ್ತಿದ್ದಾರೆ. ಮೈಸೂರು ನಗರದಲ್ಲಿ ಒಂದು ವಾರಕ್ಕೆ ಒಂದು ಸಾರಿ ನೀರನ್ನು ಕೊಡುತ್ತಿದ್ದಾರೆ. ಹಳ್ಳಿಗಳಲ್ಲಂತೂ ಕೊನೆಯಪಕ್ಷ ಅರ್ಧಗಂಟೆಯೂ ಸಹ ಕರೆಂಟ್ ಇರುವುದಿಲ್ಲ ಎಂದರೆ, ಹ್ಯಾಂಡ್‌ಪಂಪ್‌ಗಳಲ್ಲಿ ನೀರು ಬರುವುದಿಲ್ಲ, ಮಿನಿ ವಾಟರ್ ಸಪ್ಲೈಗಳಲ್ಲಿ ನೀರು ತುಂಬುವುದಿಲ್ಲ ಹೀಗಾದರೆ ಅವರು ಯಾವ ಕಡೆ ಹೋಗಬೇಕು? ಸ್ವಾಮಿ, ಹಳ್ಳಿ ಜನ ಏನು ಕೇಳುತ್ತಾರೆ? ಕುಡಿಯುವುದಕ್ಕೆ ನೀರು, ನಡೆಯುವುದಕ್ಕೆ ದಾರಿ ಇವೆರಡನ್ನೇ ಅವರು ಕೇಳುವುದು. ಜನರಿಗೆ ಕುಡಿಯುವುದಕ್ಕೆ ನೀರು ಕೊಡದಿರುವ ಈ ಸರ್ಕಾರವನ್ನು ಯಾವ ರೀತಿ ನಾವು ಕ್ರಿಯಾಶೀಲವನ್ನಾಗಿ ಮಾಡಬೇಕು ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಈ ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿ ದೀವಾಳಿಯಾಗಿದೆ, ಇವತ್ತು 600 ಕೋಟಿ ರೂಪಾಯಿಗಳಷ್ಟು ಕೊರತೆಯಾಗಿದೆ. ಇಂಥ ಸನ್ನಿವೇಶದಲ್ಲಿ ನಾವು ಏಕೆ ಈ ನಿಲುವಳಿ ಸೂಚನೆಯ ರೂಪದಲ್ಲಿ ಈ ವಿಷಯವನ್ನು ತಂದಿದ್ದೇವೆಂದರೆ, ಇವತ್ತು ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ನೀರಿನ ಅಭಾವದ ಪರಿಸ್ಥಿತಿ, ಬರಗಾಲದ ಪರಿಸ್ಥಿತಿ ಇದೆ. ಕಳೆದ ವರ್ಷ ಬರಗಾಲ ಬಂದಾಗ ಇವರೇನು ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಟ್ಟಿದ್ದರೋ ಆ ಭರವಸೆ ಭರವಸೆಯಾಗಿಯೇ ಉಳಿದಿದೆಯೇ ವಿನಃ ಅವು ಕಾರ್ಯಗತವಾಗಿಲ್ಲ. ಮಾನ್ಯ ಕಂದಾಯ ಸಚಿವರು ಕುಡಿಯುವ ನೀರಿನ ಅಭಾವದ ಪರಿಸ್ಥಿತಿಯನ್ನು ನೀಗಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ನೂರು ಕೋಟಿ ರೂಪಾಯಿಗಳ ಸಹಾಯವನ್ನು ಕೇಳುತ್ತೇವೆಂದು ಹೇಳಿದ್ದರು. ಇವರು ಕೇವಲ ಪತ್ರಿಕೆಗಳಲ್ಲಿ ಹಾಗೆ ಹೇಳಿದ್ದಾರೆಯೇ ಹೊರತು ಕೇಂದ್ರ ಸರ್ಕಾರಕ್ಕೆ ಇದುವರೆವಿಗೂ ಸಹಿತ ಮನವಿಯನ್ನು ಕೊಟ್ಟಿಲ್ಲ. ಅದೆಲ್ಲಕ್ಕಿಂತಲೂ ಹೆಚ್ಚಾಗಿ, ಈ ಬಗ್ಗೆ 27 ಜಿಲ್ಲಾಧಿಕಾರಿಗಳಿಂದ ವಿವರಗಳನ್ನು ತಮ್ಮ ಕಛೇರಿಯಿಂದ ಬೇಕಾದರೆ ಕೇಳಿ ತಿಳಿದುಕೊಳ್ಳಿ, ಯಾವ ಜಿಲ್ಲೆಗಳಲ್ಲೂ ಸಹ ಕುಡಿಯುವ ನೀರಿಗಾಗಿ ಒಂದು ಬೋರ್‌ವೆಲ್ ಹಾಕುವುದಕ್ಕೆ ಸಹ ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಕೊನೆಯ ಪಕ್ಷ ಜಿಲ್ಲಾಧಿಕಾರಿಗಳ ಹತ್ತಿರ ಮಾನ್ಯ ಕಂದಾಯ ಸಚಿವರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಚರ್ಚಿಸಲಿ. ಏಕೆಂದರೆ ಇವತ್ತು ಅಲ್ಲೆಲ್ಲಾ ನೀರಿಗಾಗಿ ಬಹಳ ತೊಂದರೆಯಿದೆ, ನಾನು ಬಹಳ ಪ್ರಾಮಾಣಿಕತೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ ನಾನು ರಾಜಕೀಯವನ್ನು ಬೆರೆಸುವುದಕ್ಕೆ ಪ್ರಯತ್ನಿಸುತ್ತಿಲ್ಲ. ರಾಜ್ಯದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ಆದ್ದರಿಂದ ತಾವು ಪ್ರಶ್ನೋತ್ತರಗಳನ್ನು ತಡೆಹಿಡಿದು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಡಳಿತ ಪಕ್ಷದ ಸದಸ್ಯರಿಗೆ ನಮಗಿಂತಲೂ ಬಹಳ ಕಷ್ಟವಿದೆ. ಚುನಾವಣಾ ಸಂದರ್ಭದಲ್ಲಿ ಹಳ್ಳಿಗಳಲ್ಲಿ ಓಡಾಡುವುದು

ಬಹಳ ಕಷ್ಟ ಎಂಬುದನ್ನು ಆಡಳಿತ ಪಕ್ಷದ ಸದಸ್ಯರು ಅನುಭವಿಸಿದ್ದಾರೆ. ಜನಗಳು ಯಾವ ರೀತಿ ಈ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದಾರೆ. ಹಣ ಬಿಡುಗಡೆ ಮಾಡುವುದಕ್ಕೆ ಅವರ ಹತ್ತಿರ ಒಂದು ರೂಪಾಯಿ ಕೂಡ ಇಲ್ಲ. ಕುಡಿಯುವ ನೀರಿಗೆ ತೊಂದರೆಯಾಗಿದೆ ಮತ್ತು ಇರತಕ್ಕಂಥ ಬೋರ್‌ವೆಲ್‌ಗಳು ಫೈಲ್ಯೂರ್ ಆಗಿದೆ, ತಾವು ಏನು ಮಾಡುತ್ತೀರಿ ಎಂದು ಜಿಲ್ಲಾಧಿಕಾರಿಯವರಿಗೆ ಕೇಳಿದ್ದಕ್ಕೆ, 'ನಾನೇನು ಮಾಡಲಿ' ಎಂದು ಅವರು ಹೇಳುತ್ತಿದ್ದಾರೆ. ಇವರು ಅದಕ್ಕೆಲ್ಲಾ ಹಣ ಬಿಡುಗಡೆ ಮಾಡಬೇಕು. ಆದರೆ, ಇವರು ಮಾತು ಎತ್ತಿದರೆ ಕೋಟಿಗಟ್ಟಲೆ ರೂಪಾಯಿಗಳ ಬಗ್ಗೆ ಮಾತನಾಡುತ್ತಾರಷ್ಟೆ. ಸದರಿ ವಿಷಯದ ಗಂಭೀರತೆಯನ್ನು ತಿಳಿದುಕೊಂಡು ಜನತಾ ಪರಿವಾರದ ಎಲ್ಲಾ ಸದಸ್ಯರು ಇವತ್ತು ತಮಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಹಾಗೆಯೇ, ವಿರೋಧಪಕ್ಷದ ನಾಯಕರೂ ಕೂಡ ಈ ವಿಚಾರವನ್ನೇ ನಿಲುವಳಿ ಸೂಚನೆ ರೂಪದಲ್ಲಿ ಕೊಟ್ಟಿದ್ದಾರೆ. ಸರ್ಕಾರ ಇದರ ಗಂಭೀರತೆಯನ್ನು ಅರಿತುಕೊಂಡು ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ, ಇದಕ್ಕೆ ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಅವರಿಗೆ ನಾನು ಒತ್ತಾಯ ಮಾಡುತ್ತೇನೆ. ಹಾಗೆಯೇ ಮಾನ್ಯ ಸೋಮಣ್ಣನವರು ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ತಾವು ಅವರಿಗೂ ಕೂಡ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು: ಮಾನ್ಯ ಸೋಮಣ್ಣನವರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಅವರು ಮೊದಲು ಮಾತನಾಡಲಿ. ಆನಂತರ ನಾನು ಉತ್ತರ ಕೊಟ್ಟು ಸರಿಪಡಿಸುತ್ತೇನೆ.

ಶ್ರೀ ವಿ.ಸೋಮಣ್ಣ: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ನಾನು ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ. ಇದಕ್ಕೆ ನಾನು ತಮಗೆ ಆಭಾರಿಯಾಗಿದ್ದೇನೆ.

ಅಧ್ಯಕ್ಷರು: ಮಾನ್ಯ ಸೋಮಣ್ಣನವರೆ, ತಾವು ಪ್ರಸ್ತಾಪ ಮಾಡಬೇಕೆಂದಿರತಕ್ಕಂಥ ವಿಷಯವನ್ನು ದಯವಿಟ್ಟು ಒಂದು ನಿಮಿಷದಲ್ಲಿ ಹೇಳಿ. ಹಾಗೆಯೇ, if the minister is ready to reply, I have no objection. ಮಾನ್ಯ ಸದಸ್ಯರು ಎಲ್ಲರಿಗಿಂತ ಮೊದಲು, ಅಂದರೆ ಬೆಳಗ್ಗೆ 9.00 ಗಂಟೆಗೆ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಪತ್ರ ಕೊಟ್ಟಿದ್ದಾರೆ. ಆದರೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಕೊಟ್ಟರೆ ನನ್ನದೇನೂ ಅಬ್ಜಕ್ಷನ್ ಇಲ್ಲ. ಅದರ್‌ವೈಜ್ ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳೋಣ.

ಶ್ರೀ ವಿ.ಸೋಮಣ್ಣ: ಮಾನ್ಯ ಸಭಾಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯ ದಯಮಾಡಿ ಇದಕ್ಕೆ ಅವಕಾಶ ಕೊಡಿ.

ಶ್ರೀ ಜಗದೀಶ ಶೆಟ್ಟರ್: ಬರ ಪರಿಸ್ಥಿತಿ ಬಗ್ಗೆ ಮತ್ತು ಕುಡಿಯುವ ನೀರಿನ ಬಗ್ಗೆ ಹಾಗೂ ವಿದ್ಯುತ್ ಅಭಾವದ ಬಗ್ಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯತೆ ತೋರಿಸುತ್ತಿರುವ ಬಗ್ಗೆ ಮಾತನಾಡಬೇಕಾಗುತ್ತದೆ. ಹಾಗೆಯೇ ಜನತಾ ಪರಿವಾರದವರೂ ಕೂಡ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಸದರಿ ವಿಷಯದ ಬಗ್ಗೆ ಬಹಳ ಪ್ರಮುಖವಾಗಿ ಚರ್ಚೆ ಮಾಡಲೇಬೇಕಾಗಿದೆ. ಆದ್ದರಿಂದ, ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಷಯಕ್ಕೆ ಪ್ರಾಶಸ್ತ್ಯ ಕೊಟ್ಟು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆಯನ್ನು ತೆಗೆದರೆ ನಿಮ್ಮ ಸದಸ್ಯರಿಗೆ ತೊಂದರೆಯಾಗುತ್ತದೆ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಬಹಳಷ್ಟು ತುರ್ತು ಕೆಲಸ ಆಗಬೇಕಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಏನೂ ಮಾಡುತ್ತಿಲ್ಲ. ಪ್ರಶ್ನೋತ್ತರ ವೇಳೆಯನ್ನು ತಡೆಹಿಡಿದರೂ ಪರವಾಗಿಲ್ಲ. ಮೊದಲು ಇದಕ್ಕೆ ಪ್ರಾಶಸ್ತ್ಯ ಕೊಡಲೇಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಪ್ರಶ್ನೋತ್ತರ ವೇಳೆ ಕೇವಲ ಒಂದು ಗಂಟೆ ಇರುತ್ತದೆ. ಆನಂತರ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಎಲ್ಲಾ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದ್ದರಿಂದ, ಪ್ರಶ್ನೋತ್ತರ ವೇಳೆಯನ್ನು ಮುಂದೂಡತಕ್ಕಂಥ ಸನ್ನಿವೇಶ ಏನಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು ಗಂಟೆಯೊಳಗೆ ಆಕಾಶ ಏನೂ ಕಳಚಿ ಬೀಳುವುದಿಲ್ಲ.

ಅಧ್ಯಕ್ಷರು: ಮಾನ್ಯ ಸೋಮಣ್ಣನವರ ನಿಲುವಳಿ ಸೂಚನೆಗೆ ಮಾನ್ಯ ಗೃಹ ಸಚಿವರು ಈಗ ರಿಪ್ಲೈ ಕೊಡುವುದಕ್ಕೆ ತಯಾರಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಖಿರ್ಗೆ(ಗೃಹ ಸಚಿವರು): ಮಾನ್ಯ ಸದಸ್ಯರು ಪ್ರಶ್ನೋತ್ತರ ವೇಳೆ ಆದಮೇಲೆ ಪ್ರಸ್ತಾಪ ಮಾಡಲಿ. ಅಷ್ಟರೊಳಗೆ ಸದರಿ ವಿಷಯಕ್ಕೆ ಸಂಬಂಧಪಟ್ಟಂಥ ಮಾಹಿತಿಗಳನ್ನು ತರಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸೋಮಣ್ಣನವರು ಇವತ್ತು ಬೆಳಿಗ್ಗೆ 9.00 ಗಂಟೆಗೆ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಪತ್ರ ಕೊಟ್ಟಿದ್ದಾರೆ. ಹಾಗೆಯೇ ಮಾನ್ಯ ಜಗದೀಶ್ ಶೆಟ್ಟರ್‌ರವರು 9.25ಕ್ಕೆ ಹಾಗೂ ಮಾನ್ಯ ಸಿಂಧ್ಯಾರವರು 9.20ಕ್ಕೆ ನಿಲುವಳಿ ಸೂಚನೆಯ ಪತ್ರವನ್ನು ಕೊಟ್ಟಿದ್ದಾರೆ. ಮೊದಲು ಕೊಟ್ಟಂಥ ಮಾನ್ಯ ಸೋಮಣ್ಣನವರಿಗೆ ಮೊದಲು ಅವಕಾಶ ಕೊಡಬೇಕು. Because that is also an important matter.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸದಸ್ಯರು ಬೇಗ ಕೊಟ್ಟಿರಬಹುದು. ಆದರೆ, ಯಾವ ವಿಷಯದ ಮೇಲೆ ನಿಲುವಳಿ ಸೂಚನೆ ಕೊಟ್ಟಿದ್ದಾರೆಂದು ಹಾಗೂ ಯಾರು ಕೊಟ್ಟಿದ್ದಾರೆ

ಎಂಬುದನ್ನು ಗಣನೆಗೆ ತೆಗೆದುಕೊಂಡು ತಾವು ಪ್ರಾಶಸ್ತ್ಯ ಕೊಡತಕ್ಕಂಥ ಅವಶ್ಯಕತೆ ಇದೆ. ಕೇವಲ 5 ಅಥವಾ 10 ನಿಮಿಷ ಮುಂಚಿತವಾಗಿ ಕೊಟ್ಟಿರತಕ್ಕಂಥ ಪ್ರಶ್ನೆ ಬರುವುದಿಲ್ಲ. ಸದರಿ ವಿಷಯದ ಪ್ರಾಮುಖ್ಯತೆ ಮೇಲೆ ತಾವು ತೀರ್ಮಾನ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಅದನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ಹೇಳತಕ್ಕಂಥದ್ದನ್ನು ತಾವು ಕೇಳಬೇಕು. ಆನಂತರ ತಮ್ಮ ತೀರ್ಮಾನ ಏನೆಂಬುದನ್ನು ಹೇಳಬಹುದು.

ಅಧ್ಯಕ್ಷರು: ತಾವೆಲ್ಲರೂ ಹೇಳಿರತಕ್ಕಂಥದ್ದನ್ನು ನಾನು ಈಗಾಗಲೇ ಕೇಳಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ಈ ವಿಷಯವನ್ನು ಏಕೆ ಮಂಡಿಸಿದ್ದೇವೆ ಎನ್ನತಕ್ಕಂತದ್ದನ್ನು ತಾವು ಕೇಳಬೇಕು. ಆನಂತರ ತಾವು ಇಚ್ಛೆಪಟ್ಟರೆ ನಿಯಮ 69ರ ಅಡಿಯಲ್ಲಿಯೂ ಚರ್ಚೆಗೆ ಅವಕಾಶ ಕೊಡಿ. ಒಟ್ಟಿನಲ್ಲಿ ಇಲ್ಲಿ ಪರಿಸ್ಥಿತಿ ಗಂಭೀರತೆಯ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದ ನಂತರ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರು ಎತ್ತಿರತಕ್ಕಂಥ ಪ್ರಶ್ನೆ ಕಾನೂನಿಗೆ ಸಂಬಂಧಪಟ್ಟಿದ್ದು ಹಾಗೂ ಅವರ ಜೀವಕ್ಕೆ ಅಪಾಯ ಇರತಕ್ಕಂಥದ್ದರ ಬಗ್ಗೆ ಇದೆ. ಹಾಗೆಯೇ ಇದು ಕೋಮು ಗಲಭೆಯ ಹಿನ್ನಲೆಯಲ್ಲಿ ಆಗಿರುವುದರಿಂದ ಅದಕ್ಕೂ ಕೂಡ ಹೆಚ್ಚಿನ ಮಹತ್ವ ಇದೆ. ಆದ್ದರಿಂದ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗೂ ಕೂಡ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿದನಂತರ ಅವಕಾಶ ಕೊಡುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದ ವಿಚಾರವಾಗಿರುವುದರಿಂದ, ಚರ್ಚೆಗೆ ಹೆಚ್ಚಿನ ಕಾಲಾವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ.